ವಾರದ ಪತ್ರ

## ಎಂದೂ ಮರೆಯಲಾಗದ 'ಶಂಕರ್ ಗುರು'

ಡಬ್ಬಿಂಗ್ ಚಿತ್ರಗಳ ಹಾವಳಿಯ ನಡುವೆ ಮರೆಯಲಾಗದ ಒಂದು ಸಿನಿಮಾ 'ಶಂಕರ್ ಗುರು'. ರಾಜ್‌ಕುಮಾರ್ ತ್ರಿಪಾತ್ರದಲ್ಲಿ ಕಾಣಿಸಿಕೊಂಡಿರುವ ಅಪರೂಪದ ಸಿನಿಮಾ ಇದು. ಪವಾಡ ಎಂಬಂತೆ 'ಉದಯ' ವಾಹಿನಿಯಲ್ಲಿ 'ಶಂಕರ್ ಗುರು' ಸಿನಿಮಾವನ್ನು ಇತ್ತೀಚೆಗೆ ಪ್ರಸಾರ ಮಾಡಲಾಯಿತು. ಸಿನಿಮಾದ ಯಾವುದೇ ಹಾಡು ಮತ್ತು ದೃಶ್ಯಗಳಿಗೆ ಕತ್ತರಿ ಹಾಕಲಿಲ್ಲ ಎನ್ನುವುದು ವಿಶೇಷ.

ಇತ್ತೀಚೆಗೆ ಹೆಚ್ಚೂಕಡಿಮೆ ಎಲ್ಲ ಕನ್ನಡ ವಾಹಿನಿಗಳು ಡಬ್ಬಿಂಗ್ ಸಿನಿಮಾಗಳನ್ನೇ ಹೆಚ್ಚು ಪ್ರಸಾರ ಮಾಡುತ್ತಿವೆ. ಇಲ್ಲವೇ ತಮ್ಮಲ್ಲಿರುವ ಹಳೆಯ ಸಿನಿಮಾಗಳನ್ನೇ ಮತ್ತೆ ಮತ್ತೆ ಪ್ರಸಾರ ಮಾಡುತ್ತಿವೆ. 'ಹಾಡಿದ್ದೇ ಹಾಡು ಕಿಸುಬಾಯಿ ದಾಸ' ಎನ್ನುವ ದಿನಗಳಲ್ಲಿ 'ಶಂಕರ್ ಗುರು' ಖುಷಿ ನೀಡಿತು.

—ಆರ್. ವೀರೇಶ್ ಕುಮಾರ್, ಬೆಂಗಳೂರು



## ತಪ್ಪು ಪದ ಹಾಗೂ ತಪ್ಪು ಲೆಕ್ಕ

ಸ್ಟಾರ್ ಸುವರ್ಣದ 'ಬೆಟ್ಟದ ಹೂ' ಧಾರಾವಾಹಿಯಲ್ಲಿ ಮಾಲಿನಿಯು ಅವಿವಾಹಿತಳಾದ ಚಾಂದಿನಿಯನ್ನು ಸಂಬೋಧಿಸುವಾಗ – 'spinster' ಎಂಬ ಪದದ ಬದಲು 'bachelor' ಪದವನ್ನು ಉಪಯೋಗಿಸುತ್ತಾಳೆ. ಇದರಲ್ಲಿ ಲೆಕ್ಕ ತಪ್ಪಿದ ಘಟನೆಯೂ ನಡೆಯುತ್ತದೆ. ಅಘೋರಗೌರಿ ವ್ರತ ಮುಗಿಸಿದ ಹೂವಿ ದೇವಸ್ಥಾನದಲ್ಲಿ ಮೂವರು ಮುತ್ತೈದೆಯರಿಗೆ ಬಾಗಿನ ಕೊಡಲು ತಯಾರಿ ಮಾಡಿಕೊಳ್ಳುತ್ತಾಳೆ. ಆದರೆ ಮರುದಿನದ ಕಂತಿನಲ್ಲಿ ನಾಲ್ವರಿಗೆ ಬಾಗಿನ ಕೊಡುತ್ತಾಳೆ.

—ಉಷಾ ಶ್ರೀಪಾದ, ಬನಶಂಕರಿ

## ಪತ್ತೆ ಇಲ್ಲದ ಪಾತ್ರಧಾರಿಗಳು

ಕಲರ್ಸ್ ಕನ್ನಡದ 'ರಾಮಾಚಾರಿ' ಧಾರಾವಾಹಿಯಲ್ಲಿ ಮನೆಯ ಸೊಸೆ ತೀರಿದಾಗ ಕೂಡ ನಾಯಕನ ತಂದೆ ಬರಲಿಲ್ಲ. 'ಗೀತಾ'ದಲ್ಲಿ ಗೀತಾಳ ತಂಗಿ ಮತ್ತು ಆಕೆಯ ಪ್ರೇಮಿ ವಿಜಿ, ವಿಜಿಯ ಹೆತ್ತ ತಾಯಿ ಮತ್ತು ಅವನ ಒಬ್ಬ ತಮ್ಮ ನಾಪತ್ತೆ.

ಧಾರಾವಾಹಿಗಳ ಹೆಸರಂತೂ ಯಾರಿಗೆ ಪ್ರೀತಿಯೋ ತಿಳಿಯದು. 'ಭಾಗ್ಯ ಲಕ್ಷ್ಮಿ', 'ಮಿಥುನ ರಾಶಿ', 'ವಿಜಯ ದಶಮಿ' ಇವುಗಳಲ್ಲಿ ಎರಡು ಹೆಸರುಗಳಿವೆ. ಹೀಗೆ ಹೆಸರುಗಳು ಶೀರ್ಷಿಕೆಯಲ್ಲಿದ್ದಾಗ ಬಿಡಿಸಿ ಬರೆಯಬೇಕು. ಇಲ್ಲವೇ ಒಂದು ಹೆಸರಿನ ನಂತರ ಅಲ್ಪ ವಿರಾಮ ಚಿಹ್ನೆಯನ್ನು ಬಳಸಬೇಕು. ಎರಡನ್ನೂ ಕೂಡಿಸಿ ಬರೆದರೆ ತಪ್ಪಾಗುತ್ತದೆ.

—ಶಾಂತಾ ನಾಗರಾಜ್, ಬೆಂಗಳೂರು

## ಒಮ್ಮೆ ಸಿನಿಮಾ ನೋಡಿ, ಪ್ಲೀಸ್..

ಕಲರ್ಸ್ ವಾಹಿನಿಯಲ್ಲಿ 'ದಾಸ ಪುರಂದರ' ಮೊದಲು ವಾರದಲ್ಲಿ ಐದು ದಿನ ಬರ್ತಾ ಇತ್ತು. ನಂತರ ಎರಡೇ ದಿನಕ್ಕೆ ಸೀಮಿತ ಆಯಿತು. ಅದು ನಿರಾಸೆಯನ್ನು ಉಂಟು ಮಾಡಿತು. ಆದರೂ ವಾರಾಂತ್ಯದಲ್ಲಿ ನಾವು ಅದನ್ನು ವೀಕ್ಷಿಸಲು ಕಾದಿರುತ್ತೇವೆ.

ಆದರೆ ಇದು ಬೇರೆ ಧಾರಾವಾಹಿಗಳಂತೆಯೇ ಜಾಡಿಗೆ ಬಿದ್ದಿದೆ. ಪುರಂದರದಾಸರ ಸಮಾಜಮುಖಿ ಚಿಂತನೆಗೆ ಪೂರಕವಾಗಿ ಕಥೆ ಹೆಣೆದು ಪ್ರಸಾರ ಮಾಡಲು ನಮ್ಮ ಆಗ್ರಹ. ಕನ್ನಡದಲ್ಲಿ ಪುರಂದರದಾಸರ ಎರಡು ಸಿನಿಮಾಗಳು ಬಂದಿವೆ. ವಾಹಿನಿಯವರು ಆ ಸಿನಿಮಾಗಳನ್ನು ನೋಡಿ ಧಾರಾವಾಹಿಯನ್ನು ಮುಂದುವರಿಸಿದರೆ ನೋಡಲು ಸಹ್ಯ ಆಗಬಹುದು ಎಂದು ಅನಿಸುತ್ತದೆ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## 'ಮರುಪ್ರಸಾರ' ಎಂದಾದರೂ ಹೇಳಿ...

ಚಂದನದ 'ಥಟ್ ಅಂತ ಹೇಳಿ'ಯನ್ನು ನಾವು ಮನೆಮಂದಿಯೆಲ್ಲಾ ಕುಳಿತು, ಉತ್ತರ ಹೇಳುತ್ತಾ ನೋಡುತ್ತೇವೆ. ಬೇರೆ ಚಾನಲ್ ನೋಡುತ್ತಿದ್ದರೂ ಒಂಬತ್ತೂವರೆ ಆಗುತ್ತಿದ್ದಂತೆ 'ಚಂದನ'ಕ್ಕೆ ಸ್ಕಿಪ್ ಆಗುತ್ತೇವೆ. ಇತ್ತೀಚೆಗೆ ಸ್ಪರ್ಧಿಗಳ ಅಭಾವದಿಂದಲೋ ಏನೋ ಈ ಕಾರ್ಯಕ್ರಮ ಮತ್ತೆ ಮತ್ತೆ ಮರುಪ್ರಸಾರ ಆಗುತ್ತಿದೆ. ಹಿಂದೆ ನೋಡಿದ್ದ ಸಂಚಿಕೆ ಎಂದು ನಿರಾಸೆಯಿಂದ ಚಾನಲ್ ಬದಲಾಯಿಸುತ್ತೇವೆ. ಹಳೆಯ ಸಂಚಿಕೆಗಳ ಪ್ರಸಾರದ ಸಂದರ್ಭದಲ್ಲಿ 'ಮರುಪ್ರಸಾರ' ಎಂದಾದರೂ ಹಾಕಿ.

—ಮನೋಜ್ ಕುಮಾರ್ ಕೆ.

## ಸಾವಿನ ಮನೆಯಲ್ಲಿ ಹಬ್ಬ ಸರಿಯೇ?

ಕಲರ್ಸ್ ಕನ್ನಡದ 'ರಾಮಾಚಾರಿ'ಯ ನಾರಾಯಣಾಚಾರ್ಯರ ಸೊಸೆ ತೀರಿಕೊಂಡು ಇನ್ನೂ ಎರಡು ತಿಂಗಳು ಆಗಿಲ್ಲ. ಕರ್ಮಾನುಷ್ಠಾನ ಪರಿಪಾಲಿಸುವ ಮನೆಯಲ್ಲಿ ಒಂದು ವರ್ಷದವರೆಗೂ ಯಾವುದೇ ಹಬ್ಬ ಅಥವಾ ಶುಭ ಸಮಾರಂಭ ಮಾಡುವಂತಿಲ್ಲ. ಆದರೆ ಆಚಾರ್ಯರ ಮನೆಯಲ್ಲಿ ಸಂಕ್ರಾಂತಿ ಹಬ್ಬದ ಸಂಭ್ರಮ ಕಾಣಿಸಿಕೊಳ್ಳುತ್ತಿದೆ. ಕರ್ಮ ಕರ್ಮ ಎನ್ನೋಣವೇ?

—ವಿಜಯ್ ಹೆಮ್ಮಿಗೆ, ಮೈಸೂರು

## ನೈತಿಕತೆ ನಾಸ್ತಿ, ಮನರಂಜನೆಯೂ ಶೂನ್ಯ

ದೃಶ್ಯ ಮಾಧ್ಯಮ ಅತ್ಯಂತ ಪ್ರಭಾವಶಾಲಿ. ಹೀಗಿರುವಾಗ ಧಾರಾವಾಹಿಗಳನ್ನು ನಿರ್ಮಿಸುವ ನಿರ್ಮಾಪಕರು, ನಿರ್ದೇಶಕರು ಭಾರತೀಯ ಸಂಸ್ಕೃತಿಗೆ ಒತ್ತು ಕೊಡಬೇಕು. ಧಾರಾವಾಹಿಗಳನ್ನು ಕುಟುಂಬದ ಸದಸ್ಯರೆಲ್ಲ ಕೂತು ನೋಡುವಾಗ ಪ್ರೀತಿ ವಿಶ್ವಾಸಗಳ ಮಧುರ ಸಮ್ಮಿಲನ ಇರಬೇಕು. ಮಕ್ಕಳಲ್ಲಿ ನೈತಿಕತೆ ಬೆಳೆಯುವಂತಿರಬೇಕು. ಪೂರ್ತಿ ಮನರಂಜನೆ ನೀಡುವಂತೆ ಆದರೂ ಇರಬೇಕು. ಇದಾವುದೂ ಇಲ್ಲದೆ ಅಶ್ಲೀಲ ಸಂಭಾಷಣೆ, ಬರೀ ಕೋಪ, ತಾಪ, ದ್ವೇಷ, ಅಸೂಯೆ, ವ್ಯಂಗ್ಯ, ಹಿಂಸೆ, ಪಿತೂರಿಯೇ ಹೂರಣವಾದರೆ ಹೇಗೆ?

—ಕೆ.ಎನ್. ಶ್ವೇತ

## ವಾಹಿನಿಗಳಿಗೆ ಬೇಡವಾದ ಮಕ್ಕಳು

ಹತ್ತಾರು ಖಾಸಗಿ ಚಾನಲ್‌ಗಳು ಇವೆ. ಇವುಗಳಲ್ಲಿ ಒಂದಾದರೂ ಮಕ್ಕಳಿಗಾಗಿ ಒಂದು ಕಥೆಯನ್ನೂ ನಿರೂಪಿಸುವುದಿಲ್ಲ. ಮಕ್ಕಳು ತಮಗೆ ಬೇಡವಾದ ಧಾರಾವಾಹಿಗಳನ್ನು ಪೋಷಕರ ಜೊತೆ ಕುಳಿತು ನೋಡುವಂತೆ ಆಗಿರುವುದು ದುರಂತವೇ ಸರಿ.

—ಕೆ. ಹೊನ್ನಪ್ಪ, ಕ್ಯಾತ್ಸಂದ್ರ

## ಸುಪ್ರೀಂ ಕೋರ್ಟ್ ಎಚ್ಚರಿಕೆ ಪಾಠವಾಗಲಿ

ರಾಜ್ಯದಲ್ಲಿ ಚುನಾವಣಾ ಪರ್ವ ಆರಂಭವಾಗಿದೆ. ಪಕ್ಷಗಳು–ಅಭ್ಯರ್ಥಿಗಳು ಸುದ್ದಿ ಚಾನಲ್‌ಗಳಲ್ಲಿ ಕಾಣಿಸಿಕೊಳ್ಳಲು ಹಾತೊರೆಯುವುದು ಸಹಜ. ಅಂತೆಯೇ ಸುದ್ದಿ ವಾಹಿನಿಗಳು ತಮ್ಮ ಹೊಣೆಗಾರಿಕೆ ಅರಿತು, ಎಲ್ಲ ಪಕ್ಷಗಳಿಗೆ ಸಮಾನ ಅವಕಾಶವನ್ನು ನೀಡಬೇಕು.

ಪಕ್ಷ ಮತ್ತು ವ್ಯಕ್ತಿನಿಷ್ಠೆ ತೋರಿಸದೆ ನಿಷ್ಪಕ್ಷಪಾತವಾಗಿ ನಡೆದುಕೊಳ್ಳಬೇಕು. ಹಾಗೆಯೇ ಚರ್ಚೆ, ವಾದ–ವಿವಾದಗಳನ್ನು ನಡೆಸಬೇಕು. ಆದರೆ ವಾಸ್ತವದಲ್ಲಿ ಹಾಗೆ ಆಗುವುದಿಲ್ಲ. ಇತ್ತೀಚೆಗೆ ಸುಪ್ರೀಂ ಕೋರ್ಟ್ ನೀಡಿರುವ ಎಚ್ಚರಿಕೆಯನ್ನು ಗಮನದಲ್ಲಿ ಇಟ್ಟುಕೊಂಡು ಜನಪರವಾಗಿ ಸುದ್ದಿ ನಿರೂಪಿಸುವಂತೆ ಆಗಲಿ.

—ರಮಾನಂದ ಶರ್ಮಾ, ನವದೆಹಲಿ

